5, ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯ ಪ್ರಕಾರ ಹಣ ಪಡೆದ ರೈತರ ಬೆಳೆ ನಷ್ಟವಾದಾಗ ವಿಮೆ ಹಣ ಕೊಡುವುದು.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕ ರಾಜ್ಯಾದ್ಯಂತ ಸಹಕಾರ ಸಂಘಗಳಲ್ಲಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಲಕ್ಷಾಂತರ ಜನ ರೈತರಿಗೆ ಬೆಳೆಸಾಲ ಕೊಡುವಾಗ ವಿಮಾಯೋಜನೆ ಜಾರಿಗೆ ತಂದು ವಿಮೆಯ ಹಣವನ್ನು ಪಡೆದಿರುತ್ತಾರೆ. ಬೆಳೆಗಳು ನಷ್ಟವಾದರೆ ವಿಮೆ ಹಣ ಪಾವತಿ ಮಾಡಿದ ವರಿಗೆಲ್ಲ ವಿಮೆ ಹಣ ಸಾಲಕ್ಕೆ ಜಮಾ ಮಾಡಬೇಕು. ಆದರೆ ವಿಮೆ ಕಂಪನಿಯವರು ಹೇಳುವುದು, ಇಡೀ ತಾಲ್ಲೂಕಿಗೆ ಒಂದು ಯೂನಿಟ್‌ಆಗಿ ಪರಿಗಣಿಸಿ ತಾಲ್ಲೂಕಿನಾದ್ಯಂತ ಬೆಳೆ ನಷ್ಟವಾಗಿ ವ್ಯವಸಾಯ ಇಲಾಖೆ ಯವರು ರಿಪೋರ್ಟ್ ಕೊಟ್ಟರೆ, ಇಡೀ ತಾಲ್ಲೂಕಿಗೆ (ಯೂನಿಟ್) ಕೊಡುತ್ತಾರಂತೆ ಇದು ತುಂಬಾ ಅನ್ಯಾಯ. ಸಾಲ ಕೊಡುವಾಗ ಪ್ರತಿವ್ಯಕ್ತಿ ಸಾಲ ಪಡೆಯುವಾಗ ಅವನ ಸಾಲದ ಹಣದ ಮೇಲೆ ವಿಮೆಯ ಹಣವನ್ನು ಪಡೆಯುವ ಉದ್ದೇಶ, ಅವನ ಫಸಲು ನಷ್ಟವಾದರೆ ವಿಮೆ ಕೊಡಬೇಕು. ಆದುದರಿಂದ ರೈತರ ಹಿತದೃಷ್ಟಿಯಿಂದ ಬೆಳೆ ಯಾರದ್ದು ನಷ್ಟವಾಗುತ್ತದೆ ಅವರಿಗೆ ವಿಮೆ ಹಣ ಕೊಡು ವಂತಾಗಬೇಕು. ಇದಕ್ಕೆ ಮಾನ್ಯ ಸಹಕಾರಿ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ರೈತರ ಸಮಸ್ಯೆಯನ್ನು ಪರಿಹರಿಸುವರೆ ?

ಶ್ರೀ ಬಸವರಾಜ್‌ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಕೇಂದ್ರ ಸರ್ಕಾರವು ೧೯೫೫-೫೬ರ ಮುಂಗಾರಿ ಹಂಗಾಮಿನಿಂದ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು ರಾಜ್ಯದ ೧೯ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಯಿತು, ಈ ಕೆಳಕಂಡ ಬೆಳೆಗಳನ್ನು ೧೯೮೬-೮೭ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ತರಲಾಗಿದೆ.

ಋತುಮಾನ	ಬೆಳೆಗಳು
೧ ಮುಂಗಾರು	ಭತ್ತ, ಜೋಳ, ರಾಗಿ, ಮುಸುಕಿನ ಜೋಳ ಸಜ್ಜೆ, ಶೇಂಗಾ ಸೂರ್ಯಕಾಂತಿ ಮತ್ತು ತೊಗರಿ
೨ ಹಿಂಗಾರು	ಜೋಳ, ಗೋಧಿ ಕಡಲೆ ಮತ್ತು ಕುಸುಮೆ
೩ ಬೇಸಿಗೆ	ಭತ್ತ ರಾಗಿ ಮತ್ತು ಶೇಂಗಾ

ಆಯ್ಕೆಯಾದ ಬೆಳೆಗಳ (ಆಹಾರ ಧಾನ್ಯ ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು) ಮೇಲೆ ನಿರ್ಧರಿಸಿದ ಕ್ಷೇತ್ರದಲ್ಲಿ (ತಾಲ್ಲೂಕು) ವಾಣಿಜ್ಯ ಸಹಕಾರಿ ಮತ್ತು ಪ್ರಾಂತೀಯ ಗ್ರಾಮೀಣ ಬ್ಯಾಂಕಿಂಗಳಿಂದ ಬೆಳೆ ಸಾಲ ಪಡೆದಿರುವ ಎಲ್ಲಾ ರೈತರಿಗೂ ಈ ಯೋಜನೆಯು ಕಡ್ಡಾಯವಾಗಿರುತ್ತದೆ.

ಭಾರತ ಸರ್ಕಾರದವರು ನೀಡಿರುವ ಮಾರ್ಗದರ್ಶನದ ಪ್ರಕಾರ ಪ್ರತಿ ತಾಲ್ಲೂಕಿಗೆ ನಿಗಧಿಪಡಿಸಿರುವ ಪ್ರಾರಂಭಿಕ ಇಳುವರಿಗಿಂತ (ತಾಲ್ಲೂಕಿನ ಐದು ವರ್ಷಗಳ ಸರಾಸರಿ ಇಳುವರಿಯ ಶೇ ೮೦ರಷ್ಟು) ಅವರು ಪಡೆಯುವ ಇಳುವರಿಯು ಇದನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಮಾಡುವ ಬೆಳೆ ಕಟಾವು ಸಮೀಕ್ಷೆಯ ಆಧಾರದ ಮೇಲೆ ಪರಿಗಣಿಸಲಾಗುತ್ತದೆ. ಕಡಿಮೆಯಾದಲ್ಲಿ ಅವರಂ ನಷ್ಟ ಪರಿಹಾರ ಧನವನ್ನು ಪಡೆಯಲು ಅರ್ಹರಾಗಿರುತ್ತಾರೆ, ನಷ್ಟ ಪರಿಹಾರವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗುವುದು.

*ಇಳುವರಿಯಲ್ಲಿ ಕೊರತೆ

ಪ್ರಾರಂಭಿಕ ಇಳುವರಿ ರೈತರು ಮಾಡಿಸಿರುವ ಒಟ್ಟು ವಿಮೆ

ನಿರ್ಧರಿತ ಕ್ಷೇತ್ರದಲ್ಲಿಯ ವಾಸ್ತವಿಕ ಸರಾಸರಿ ಇಳುವರಿಯನ್ನು ಪ್ರಾರಂಭಿಕ ಇಳುವರಿ ಯಿಂದ ಕಳೆದರೆ ಬರುವುದೇ ಇಳುವರಿಯ ಕೊರತೆ)

ಹೋಬಳಿ ಮತ್ತು ಹಳ್ಳಿಯ ಮಟ್ಟದಲ್ಲಿ ಆಧಾರದ ಭೂತ ಅಂಕಿಅಂಶಗಳು ಲಭ್ಯವಿಲ್ಲವಾದುದ ರಿಂದ ಈ ಯೋಜನೆಯಡಿಯಲ್ಲಿ ತಾಲ್ಲೂಕನ್ನು ನಿರ್ಧರಿಸಿದ ಕ್ಷೇತ್ರವಾಗಿ ನಿಗಧಿಪಡಿಸಲಾಗಿದೆ. ಸರಾಸರಿ ಇಳುವರಿಯ ಆಧಾರಭೂತ ಅಂಕಿಅಂಶಗಳನ್ನು ಪಡೆಯಲು ನಿರ್ಧರಿಸಿದ ಕ್ಷೇತ್ರದ, ಪ್ರತಿ ಋತುಮಾನದ, ಪ್ರತಿ ಬೆಳೆಗೆ ಕನಿಷ್ಟ ೧೬ ಬೆಳೆ ಕಟಾವು ಸಮೀಕ್ಷೆಗಳನ್ನು ಬೆಳೆ ವಿಮಾ ಯೋಜನೆಯಡಿಯಲ್ಲಿ ನಿಗದಿ

ಮಾಡಲಾಗಿದೆ. ಪ್ರತ್ಯೇಕ ರೈತರ ಮಂಟ್ಪದಲ್ಲಿ ಸರಾಸರಿ ಇಳುವರಿಯ ಆಧಾರಭೂತ ಅಂಕಿಅಂಶಗಳನ್ನು ಪಡೆಯಲು ಹೆಚ್ಚಿನ ಜನಶಕ್ತಿ ಮತ್ತು ಖರ್ಚು ಆಗುತ್ತದೆ. ಇದರಿಂದ ರೈತರು ಹೆಚ್ಚಿನ ವಿಮಾ ಕಂತನ್ನು ಕೊಡಬೇಕಾಗುತ್ತದೆ. ಆದುದರಿಂದ ವಿಮಾ ಕಂತನ್ನು ಕೆಳಗಿನ ಮಟ್ಟದಲ್ಲಿಡಲು ಬೆಳೆ ವಿಮಾ ಯೋಜನೆಯನ್ನು ತಾಲ್ಲೂಕುಮಟ್ಟದಲ್ಲಿ, ಸಮೂಹ ವಿಮೆಯನ್ನಾಗಿ ಜಾರಿಗೊಳಿಸಲಾಗಿದೆ. ದೀರ್ಘಾವಧಿಯಲ್ಲಿ ಸಾಕಷ್ಟು ಸರಾಸರಿ ಇಳುವರಿಯ ಅಂಕಿ ಅಂಶಗಳನ್ನು ಒದಗಿಸಿದರೆ, ಈಯೋಜನೆಯನ್ನು ಹೋಬಳಿ, ಹಳ್ಳಿಯ ಅಥವಾ ವೈಯಕ್ತಿಕ ಮಟ್ಟದಲ್ಲಿ ಕೊಡಲು ಸಾಧ್ಯವಾಗಬಹುದು.

ಈ ಯೋಜನೆ ರೈತರಿಗೆ ಲಾಭದಾಯಕವಾಗಿದೆ. ೧೯೮೫ರ ಮುಂಗಾರು ಹಂಗಾಮಿನಲ್ಲಿ ೩.೦೩ ಕೋಟಿ ರೂಪಾಯಿಂಗಳನ್ನು ನಷ್ಟ ಪರಿಹಾರದ ರೂಪದಲ್ಲಿ ವಿಮೆ ಮಾಡಿಸಿರುವ ರೈತರುಗಳಿಗೆ ನೀಡಲಾಗಿದೆ.

6. ಡಾ॥ ಅಂಬೇಡ್ಕರ ಬಾಲಕಿಯರ ವಸತಿ ವಿದ್ಯಾಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಎಲ್ಲಾ ತರಗತಿಗಳಿಗೂ ಅನ್ವಯಿಸುವುದು

ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಸರ್ಕಾರಿ ಹುಕುಂ ನಂ ಇ.ಡಿ. ೨೮೮ ಎಂ. ಹೆಚ್. ಎಸ್. ೮೫, ತಾರೀಖು. ೧೫-೫-೮೬ರ ಪ್ರಕಾರ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿವಿದ್ಯಾಶಾಲೆಯ ನಿಯಮಾವಳಿಗಳ ಮಾದರಿಯಲ್ಲಿ ಕನ್ನಡದ ಜೊತೆಗೆ ಇಂಗ್ಲೀಷ್ ಮಾಧ್ಯಮವನ್ನು ಬಳಸಲು ಡಾ॥ ಬಿ. ಆರ್. ಅಂಬೇಡ್ಕರ್ ಪರಿಶಿಷ್ಟಜಾತಿ ವರ್ಗ ಪ್ರತಿಷ್ಠಾನ್ವಿತ ಬಾಲಕಿಯರ ವಸತಿ ವಿದ್ಯಾಶಾಲೆಯನ್ನು ಮಂಜೂರ್ಮಾಡಲಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಸ್ಕೂಲು ಮಾದರಿಯಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಬಾಲಕಿಯರ ವಸತಿ ವಿದ್ಯಾಶಾಲೆಗೂ, ಇಂಗ್ಲಿಷ್ ಮಾಧ್ಯಮವನ್ನು ಎಲ್ಲಾ ತರಗತಿಗೂ ಅನ್ವಯಿಸುವಂತೆ ಸರ್ಕಾರದವರು ೧೯೮೭-೮೮ ರಿಂದ ಜಾರಿಗೆ ಕೊಡಲು ಹುಕುಂ ಮಾಡುವರೇ?

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—ಸ್ವಾಮಿ, ಈಗ ಇಂಗ್ಲೀಷ್ ಮಾಧ್ಯಮವನ್ನು ಜಾರಿಗೆ ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಇದಕ್ಕೆ ಕ್ಯಾಬಿನೆಟ್, ಸಮಿತಿಯನ್ನು, ನೇಮಕ ಮಾಡಿದೆ. ಇಷ್ಟರಲ್ಲೇ ಸಮಿತಿ ಸೇರುತ್ತದೆ. ಸೇರಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ,

ಅಧ್ಯಕ್ಷರು —ಶ್ರೀ ಶಿವಲಿಂಗೇಗೌಡ, ಆಬ್ಸೆಂಟ್

ಶ್ರೀ ರಾಮಕೃಷ್ಣ ಆಬ್ಸೆಂಟ್

7 ೧೯೮೬-೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳಿಗೆ ಸರ್ಕಾರದಿಂದ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳೆಷ್ಟು ಮತ್ತು ಈವರೆಗೆ ಬರಗಾಲ ಕಾಮಗಾರಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಎಂಬ ವಿವರದ ಬಗ್ಗೆ ಮತ್ತು ಕೂಲಿ ಸಿಗದೆ, ಅಲೆಯುತ್ತಿರುವ ಕೂಲಿ ಕಾರ್ಮಿಕರಿಗೆ ಸರ್ಕಾರ ಕೂಲಿಗಾಗಿ ಏನು ವ್ಯವಸ್ಥೆ ಮಾಡಿದೆ ಎಂಬ ಸಾರ್ವಜನಿಕ ಮಹತ್ವವಾದ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಿಂದ ಇದ್ದ ತೀವ್ರ ಬರಗಾಲ ಪರಿಸ್ಥಿತಿಯು ೧೯೮೬-೮೭ರ ಬೇಸಿಗೆಯ ತಿಂಗಳುಗಳಾದ ಏಪ್ರಿಲ್ ಮೇ ಮತ್ತು ಜೂನ್ ತಿಂಗಳವರೆಗೆ ಮುಂದುವರಿದುಕೊಂಡು ಬಂದಿತ್ತು ೧೯೮೭ರ ಜೂನ್, ಜುಲೈ ತಿಂಗಳಿಂದ ಆರಂಭವಾಗುವ ಮುಂಗಾರು ಮಳೆಯಿಂದ, ಕೃಷಿ ವರ್ಷದಲ್ಲಿ ರಾಜ್ಯದ ಬಹುತೇಕ ಕಡೆ ಒಳ್ಳೆಯ ಮಳೆಯಾಗಿದ್ದು ಕೆಲವೇ ಭಾಗಗಳಲ್ಲಿ ಅಲ್ಲಲ್ಲಿ ಸಾಕಷ್ಟು ಮಳೆಯಾಗದೇ ಅಭಾವ ಪರಿಸ್ಥಿತಿಯೂ ಉದ್ಭವಿಸಿತ್ತು.